# ದಲಿತ ಸಾಹಿತ್ಯ ವಿಮರ್ಶೆ

ರವಿ ಬಸವರಾಜ ಸಣಕಂಬಿ

ದಲಿತ ಸಾಹಿತ್ಯ ಹುಟ್ಟಿಕೊಂಡು ಐದು ದಶಕಗಳಾಗುತ್ತಿವೆ. ದಲಿತ ಪದವು ಎಪ್ಪತ್ತರ ದಶಕದಿಂದಲೂ ಹೆಚ್ಚು ಪರಿಚಿತ ಪದವಾಗಿದೆ. ಅದಕ್ಕಿಂತಲೂ ಮುಂಚಿತವಾಗಿ ಇತ್ತಾದರು ಅದನ್ನು ಮುಖ್ಯ ಭೂಮಿಕೆಯಾಗಿ ಬಳಸಿಕೊಂಡಿಲ್ಲ. ದಲಿತ ಎನ್ನುವ ಆಲೋಚನೆ ಹುಟ್ಟಿಕೊಂಡಾಗ ಆಧುನಿಕ ಸಾಹಿತ್ಯ ಹಲವು ಪ್ರಕಾರಗಳಲ್ಲಿ ದಲಿತರ ಬದುಕು ಬವಣೆಗಳು ಕಥಾವಸ್ತುಗಳಾದವು. ಅಂತಹ ಕಥಾವಸ್ತುಗಳು ಓದುಗರಿಗೆ ಕಣ್ಣು ತೆರೆಸುತ್ತಲೇ ಇವೆ. ಆದರೆ ಸಾಹಿತ್ಯಾಭಿರುಚಿ ಇರುವ ಓದುಗರ ಸಂಖ್ಯೆ ತೀರ ಕಡಿಮೆ. ಅಂಥ ಓದುಗರಲ್ಲಿಯೂ ಸಹ ಅನೇಕ ವೈರುಧ್ಯಗಳನ್ನು ಇತ್ತೀಚಿನ ದಿನಗಳಲ್ಲಿ ಕಾಣಬಹುದಾಗಿದೆ. ಅದು ಆತಂಕದ ವಿಷಯವು ಹೌದು. ಅಕ್ಷರಸ್ಥರಿಂದಲೇ ಸ್ವಾಸ್ಥ್ಯ ಸಮಾಜದ ಕಡೆಗೆ ಸಾಗುವ ದಾರಿಯನ್ನು ವಿರೂಪಗೊಳಿಸುವ ರೀತಿಯಲ್ಲಿ ಇಂದಿನ ಜಾಗತಿಕ ದಿನಗಳಲ್ಲಿ ಕಾಣುತ್ತೇವೆ. ನವಭಾರತದಲ್ಲಿ ದಲಿತರ ಮೇಲಾಗುತ್ತಿರುವ ಶೋಷಣೆ, ಅವಮಾನಗಳನ್ನು ವ್ಯವಸ್ಥಿತವಾಗಿ ಆಚರಣೆಗೆ ತರಲಾಗುತ್ತಿದೆ. ಹಳ್ಳಿಗಳಿಂದ ಹಿಡಿದು ನಗರಗಳ ವರೆಗೂ ದಲಿತರ ಮೇಲಾಗುವ ಶೋಷಣೆಗಳ ಸ್ವರೂಪ ಬದಲಾಗಿವೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಹುಟ್ಟಿಕೊಂಡ ದಲಿತ ಸಂವೇದನೆ ಎನ್ನುವುದು ಪಾಶ್ಚಿಮಾತ್ಯದ ಪ್ರೇರಣೆಗಳಿಂದಲ್ಲ. ಅದು ತನ್ನದೇ ಒಳಗಿನ ಅಂತಃಸತ್ವದ ಹೋರಾಟದ ಕಿಡಿ. ದಲಿತ ಸಾಹಿತ್ಯವು ಸಾಮಾಜಿಕ ಬದಲಾವಣೆ ಮತ್ತು ಸಮಾನತೆಯ ತತ್ವವನ್ನು ಪ್ರತಿಪಾದಿಸುತ್ತದೆ. ದಲಿತ ಸಾಹಿತ್ಯ ಚಳುವಳಿಯು ಸಮಾಜದ ತುಳಿಯಲ್ಪಟ್ಟವರ, ಕಡೆಗಣಿಸಲ್ಪಟ್ಟವರ, ಗುಲಾಮಗಿರಿತನ, ಅಸ್ಪೃಶ್ಯ ಆಚರಣೆ, ಅನಿಷ್ಟ ಪದ್ಧತಿಯ ವಿರುದ್ಧ, ಮನುಷ್ಯ ಮನುಷ್ಯನನ್ನೇ ಹಿಂಸಿಸುವ ಕ್ರೌರ್ಯದ ವಿರುದ್ಧ, ಸಾಮಾಜಿಕ ಸಮಾನತೆಗಾಗಿ, ನ್ಯಾಯಕ್ಕಾಗಿ ಪ್ರತಿರೋಧಿಸುವುದು ದಲಿತ ಸಂವೇದನೆಯ ಬಹುಮುಖ್ಯ ಗುಣವಾಗಿದೆ. ಸಮಾಜದಲ್ಲಿ ತುಳಿಯಲ್ಪಟ್ಟವರ, ಕಡೆಗಣಿಸಲ್ಪಟ್ಟವರ, ಗುಲಾಮಗಿರಿತನ, ಅಸ್ಪೃಶ್ಯ ಆಚರಣೆ, ಅನಿಷ್ಟ ಪದ್ಧತಿಯ ವಿರುದ್ಧ, ಮನುಷ್ಯ ಮನುಷ್ಯನನ್ನೇ ಹಿಂಸಿಸುವ ಕ್ರೌರ್ಯಗಳು ಹಿಂದಿನಂತೆ ಇಲ್ಲದೇ ಹೋದರೂ ಹೊಸ ಮುಖವಾಡಗಳನ್ನು ಧರಿಸಿ ದಲಿತತ್ವದ ಕ್ರಾಂತಿಯ ಗುಣವನ್ನು ಕೆಲವು ಧಾರ್ಮಿಕ ಸಂಘ ಸಂಸ್ಥೆಗಳು ಹತ್ತಿಕ್ಕುವ ಕೆಲಸವನ್ನು ಮಾಡತೊಡಗಿವೆ.

'ದಲಿತ' ಎಂಬ ಪದದಲ್ಲಿ ಅನೇಕ ರಾಜಕಾರಣ ನಡೆಯುತ್ತಲೇ ಇವೆ. ಯಾರು ದಲಿತರು ಎಂಬುದು ಸಾಹಿತ್ಯ ವಲಯದಲ್ಲಿ ಬಹು ಚರ್ಚಿತ ವಿಷಯವೂ ಆಗಿದೆ. ದಲಿತ ಪದದ ಅರ್ಥ ವಿಶಾಲಾರ್ಥಗಳಾಗಿ ಬದಲಾವಣೆ ನೀಡಿದ್ದಾರೆ. ವಿಶಾಲಾರ್ಥದ ಸಮರ್ಥನೆಯಲ್ಲಿಯೂ ಕೆಲವು ವಾಗ್ವಾದಗಳು ನಡೆದೇ ಇವೆ. ಈ ಹಿಂದೆ ದಲಿತ ಎಂಬ ಪದವು ಅಸ್ಪೃಶ್ಯ ಜಾತಿಗಳಿಗೆ ಮಾತ್ರ ಸೀಮಿತವಾಗಿತ್ತು. ಅದು ಈಗ ವಿಸ್ತಾರವಾಗಿದೆ. ದಲಿತ ಕಾಲಘಟ್ಟದ ನಂತರ ಅದರ ತಾತ್ವಿಕ ನಿಲುವುಗಳು ಬದಲಾಗಿವೆ. ಸಾಹಿತ್ಯ ವಲಯದ ದಿಗ್ಗಜರು ದಲಿತ ಎಂಬ ಪದಕ್ಕೆ ಮರು ಅರ್ಥ ಹುಟ್ಟುಹಾಕಿದ್ದಾರೆ. ಅದನ್ನು ಹಲವರು ಒಪ್ಪಿದ್ದಾದರೂ, ಅದರ ಬಗೆಗಿನ ತಿಕ್ಕಾಟಗಳು ಕೊನೆಗೊಂಡಿಲ್ಲ. ಈ ಹಿಂದೆ ಅಸ್ಪೃಶ್ಯರನ್ನು ದಲಿತರೆಂದೇ ಕರೆಯಲಾಗಿತ್ತು. ಇಂದು ಯಾರು ಅವಮಾನಿತರೋ, ಶೋಷಿತರೋ, ಹಾನಿಗೊಳಗಾದವರೋ ಅವರನ್ನೇ ದಲಿತರು ಎಂದು ಕರೆಯಲಾಗಿದೆ. ಹೀಗಾಗಿ ನೂರಾರು ತಳಸಮುದಾಯಗಳು ಮೀಸಲಾತಿ ಪಡೆಯುತ್ತಿದ್ದು ನಿಜವಾದ ಅಸ್ಪೃಶ್ಯರನ್ನು ಮೂಲೆಗುಂಪು ಮಾಡುತ್ತಿವೆ. ಅಂದರೆ ನ್ಯಾಯಯುತವಾದ ಹಕ್ಕುಗಳು ಅಸ್ಪೃಶ್ಯ ಸಮುದಾಯಗಳಿಗೆ ಸಿಗದೇ, ಸ್ಪೃಶ್ಯ ಸಮುದಾಯಗಳ ಪಾಲಿಗೆ ವರವಾಗಿ ನಿಂತಿವೆ. ವಿಶಾಲಾರ್ಥದಲ್ಲಿ ದಲಿತ ಎನ್ನುವ ಮನೋಭಾವದಲ್ಲಿಯೂ ನಿಜವಾದ ಅಸ್ಪೃಶ್ಯರನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಲೇ ಬಂದಿವೆ. ಅಸ್ಪೃಶ್ಯ ಆಚರಣೆ, ಮಡೆಸ್ನಾನ, ಮಲಹೊರುವ ಪದ್ಧತಿ, ಗ್ರಾಮ ಬಹಿಷ್ಕಾರ, ಕಂಬಾಳಪಲ್ಲಿ ಘಟನೆ, ನೇರ್ಲಾಂಜಿ ಪ್ರಕರಣಗಳು ನಮ್ಮ ಕಣ್ಣು ಮುಂದಿವೆ. ಇಂಥ ಅವಮಾನಗಳು ಬೇರೆ ಯಾವ ಜಾತಿಗಳಲ್ಲೂ ನೋಡಲು ಸಾಧ್ಯ. ಕೆಲವೇ ನಿರ್ದಿಷ್ಟವಾದ ಜಾತಿಗಳಿಗೆ ಸಿಮೀತವಾಗಿವೆ. ಇಂತಹ ಘಟನೆಗಳನ್ನು ಬೇರೆ ಯಾವ ಸಮುದಾಯವು ಅನುಭವಿಸಿದ ಉದಾಹರಣೆಗಳು ಸಿಕ್ಕಿಲ್ಲ. ಹಾಗಾದರೆ ಸಮಾಜದಲ್ಲಿ ನಿಜವಾಗಿಯು ಅನುಭವಿಸುತ್ತಿರುವ ಅಸ್ಪೃಶ್ಯರಿಗೆ ಏನೆನ್ನಬೇಕಾಗಿದೆ? ಈಗಾಗಲೇ ಅಸ್ಪೃಶ್ಯ ಜಾತಿಗಳ(ಎಸ್.ಸಿ.) ಒಳಗೆ ನೂರಾಒಂದು ಜಾತಿಗಳು ಸೇರಿವೆ. ಮೀಸಲಾತಿ ಸೌಲಭ್ಯವನ್ನು ಈ ಎಲ್ಲ ಸಮುದಾಯಗಳು ಪಡೆಯುತ್ತಿವೆ. ಮೀಸಲಾತಿ ಪಡೆಯಬೇಕಾದ ಅಸ್ಪೃಶ್ಯರಿಗೆ ಸಂಪೂರ್ಣವಾಗಿ ಸಲ್ಲುತ್ತಿಲ್ಲ. ಅದನ್ನು ಕಿತ್ತು ತಿನ್ನುವವರೇ ಹೆಚ್ಚಾಗಿದ್ದಾರೆ. ಶತಮಾನಗಳ ಸರಮಾಲೆಯಲ್ಲಿ ಅವಮಾನಗಳು, ಶೋಷಣೆಯ ನೋವುಗಳ ಆಳ ತಿಳಿಯದೇ ಮೀಸಲಾತಿಯನ್ನು ಸ್ಪೃಶ್ಯ ಜಾತಿಗಳು ಪಡೆಯುತ್ತಿವೆ. ಇಂದಿನ ಸಮಾಜದಲ್ಲಿ ಕೇವಲ ಮೀಸಲಾತಿ ಬಯಸುವ ದಲಿತ ಜಾತಿಗಳಿವೆ. ಅನೇಕರು ದಲಿತ ಜಾತಿಗಳೆಂದು ಹೇಳಿಕೊಳ್ಳುವ ಇರಾದೆಯೂ ಅವರಿಗಿಲ್ಲವಾಗಿದೆ. ಆದರೂ ಜಾತಿ ಸಂಘರ್ಷಗಳು, ಮೀಸಲಾತಿ ವಿಚಾರಗಳು ಬಂದಾಗ ಮೌನ ವಹಿಸಿಬಿಡುತ್ತವೆ. ದಲಿತ ಪರವಾದ ಕಾಳಜಿ ಅಸ್ಪೃಶ್ಯ ಜಾತಿಗಳಿಗಲ್ಲದೇ ಅನ್ಯಜಾತಿಗಳಿವೆಯೇ

ಎಂಬುದನ್ನು ಪ್ರಶ್ನಿಸಬೇಕಿದೆ. ಕನ್ನಡ ಸಾಹಿತ್ಯದ ಬುದ್ಧಿಜೀವಿ ಗಳೆಲ್ಲರೂ ಒಂದು ಕಾಲಕ್ಕೆ ಅಸ್ಪೃಶ್ಯತೆಯನ್ನು ಅನುಭವಿಸಿ ಮೇಲಕ್ಕೆರಿದವರೇ ಈಗ ಅಧಿಕಾರದಲ್ಲಿರುವುದರಿಂದಲೋ ತಮ್ಮ ಚಿಂತನೆ ವಿಸ್ತಾರತೆಯನ್ನು ಪಡಿಸದೆ ಮೆಚ್ಚಿಸಬೇಕಾಗಿಯೋ ಏನೋ ಚಳುವಳಿಗೆ ನೇತೃತ್ವವಹಿಸದೇ ಮರೆಯಾಗುತ್ತಿದ್ದಾರೆ. ಹೊಸ ಚಿಗುರುಗಳು ಹುಟ್ಟಲಿ ಎನ್ನುವ ರೂಪಕಗಳನ್ನು ಕೊಟ್ಟು ಮರೆಯಾಗುತ್ತಿದ್ದಾರೆ.

ಭಾರತ ದೇಶವು ಪ್ರಸ್ತುತದಲ್ಲಿ ಹಿಂದುಳಿಯಲು ಮುಖ್ಯ ಕಾರಣ ಜಾತಿವ್ಯವಸ್ಥೆ. ಧಾರ್ಮಿಕವಾಗಿ ಪ್ರಬಲ ಜಾತಿಗಳಿಗೆ ಮಣೆ ಹಾಕಿರುವ ಸಮಾಜದಲ್ಲಿ ಅಸ್ಪೃಶ್ಯ ಆಚರಣೆ, ಅಸಮಾನತೆ, ಕೀಳುತನ, ಮೌಢ್ಯ ಆಚರಣೆಗಳಿಂದಾಗಿ ಅಭಿವೃದ್ಧಿಯ ವಿಷಯದಲ್ಲಿ ತಟಸ್ಥವಾಗಿ ನಿಂತಿದೆ. ದೇಶದ ಒಳಗಿನ ಆರ್ಥಿಕ ಅಸಮಾನತೆಯು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದೆ. ಆರ್ಥಿಕತೆಯ ಹಂಚಿಕೆಯು ಅಸಮಾನತೆಯಿಂದ ವಿಷಮತೆಗೆ ಕಾರಣವಾಗಿ ಸಮಾಜದ ಸಂಘರ್ಷಕ್ಕೆ ಕಾರಣವಾಗಿದೆ. ಅನ್ಯಾಯ, 'ಅಸಮಾನತೆ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಸಂಘರ್ಷಗಳಿಗೆ, ಕ್ರಾಂತಿಗೆ ಕಾರಣವಾಗಿದೆ' ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಸರ್ವರ ಏಳ್ಗೆಯು ಮುಖ್ಯವಾಗಬೇಕಿತ್ತು. ಸರ್ವರ ಏಳ್ಗೆ ಬದಲಾಗಿ ಕೆಲವರ ಏಳ್ಗೆಯಾಗಿದೆ. ಶ್ರೀಮಂತರ ರಕ್ಷಣೆ ಮತ್ತು ಶ್ರೀಮಂತರ ಉದ್ಧಾರವೇ ಮುಖ್ಯವಾಗಿದೆಯೇ ಹೊರತು, ತುಳಿತಕ್ಕೆ ಒಳಗಾದವರ, ಹಿಂದುಳಿದವರ ಏಳ್ಗೆಗಳು ಆಗುತ್ತಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಪ್ರಜೆಗಳಿಗೋಸ್ಕರವಾದ ಯಾವ ಆಡಳಿತ ಇರಬೇಕಿತ್ತೊ ಅದು ಕಾಣಸಿಗುತ್ತಿಲ್ಲ. ಇದರ ಹೊರತಾಗಿ ಪ್ರಜೆಗಳು ಮತದಾರರು ಮಾತ್ರವಾಗಿ ಉಳಿಯುವ ಸ್ಥಿತಿ ನಿರ್ಮಾಣ ಮಾಡಲಾಗಿದೆ. ಅಧಿಕಾರ ಮಾತ್ರ ಆಡಳಿತಶಾಹಿ ವರ್ಗದಲ್ಲಿ ಕೇಂದ್ರಿಕೃತವಾಗಿದೆ. ಕೆಲವೇ ಪ್ರಬಲ ಸಮುದಾಯದ ಕಪಿಮುಷ್ಠಿಯಲ್ಲಿ ಸರ್ಕಾರಗಳು ನಲುಗುತ್ತಿವೆ. ಅಂಬೇಡ್ಕರ್ ಅವರ ಕನಸಿನಂತೆ ಜಾತ್ಯತೀತವಾಗಬೇಕಿದ್ದ ದೇಶ, ಜಾತಿ ರಾಜಕಾರಣದಲ್ಲಿ ಮುಳುಗಿದೆ. ಸ್ಪೃಶ್ಯ ಜಾತಿಗಳು, ಅಸ್ಪೃಶ್ಯ ಜಾತಿಗಳನ್ನು ನಿರಂತರವಾಗಿ ತುಳಿತಕ್ಕೆ ಒಳಗು ಮಾಡುತ್ತಿವೆ. ಈ ಸಾಮಾಜಿಕ ಸ್ತರವಿನ್ಯಾಸದಲ್ಲಿ ಮೇಲು-ಕೀಳುಗಳ ಹಗ್ಗಾಜಗ್ಗಾಟ ಇಂದು ನಿನ್ನೆಯದಲ್ಲ. ನೂರಾರು ವರ್ಷಗಳ ಇತಿಹಾಸವೇ ಇದೆ. ದಲಿತತತ್ವದ ಹೋರಾಟದ ಕ್ರಾಂತಿಗಳು ಹುಟ್ಟಿಕೊಂಡು ದಶಕಗಳೇ ಸಂದರೂ; ಚಳುವಳಿಗಳು ನಡೆದರೂ, ಅಸ್ಪೃಶ್ಯ ವಿಮೋಚನೆಗಾಗಿ ಮಹಾನ್ ಹೋರಾಟಗಾರರು ಸಿಡಿದೆದ್ದರೂ, ಇನ್ನೂ ಬದಲಾವಣೆಯ ಯಾವ ಗಾಳಿಯೂ ಬೀಸಲಿಲ್ಲ, ದಲಿತರ ಮೇಲೆ ದೌರ್ಜನ್ಯ, ದಬ್ಬಾಳಿಕೆಗಳು ಕೊನೆಗಾಣಲಿಲ್ಲ, ದಲಿತರ ಬದುಕುಗಳು ಹಸನಾಗಲಿಲ್ಲ ಎಂಬ ಅಭಿಪ್ರಾಯ ಪ್ರಸ್ತುತ ಭಾರತದಲ್ಲಾದ ಕೋಮು ಗಲಭೆಗಳು, ಗೋಮಾಂಸ ನಿಷೇಧ ಪ್ರಕರಣಗಳು, ಮೀಸಲಾತಿ ನಿರ್ಮೂಲನೆ, ದಲಿತ ನೌಕರರ ಹಿಂಬಡ್ತಿ ಪ್ರಕರಣಗಳು ಸಾಕ್ಷಿಯಾಗಿದೆ. ಕಾನೂನಾತ್ಮಕವಾಗಿ ದಲಿತ ಎಂಬ ಪದವನ್ನೇ ನಿಷೇಧಗೊಳಿಸುವ ಹುನ್ನಾರಗಳು ನಡೆಯುತ್ತಿವೆ. ಸರ್ಕಾರವನ್ನು ನಿರಂತರವಾಗಿ ಆಳುತ್ತಿರುವ ಪ್ರಬಲ ಜಾತಿಗಳ ವಿರುದ್ಧ ತಳಸಮುದಾಯಗಳನ್ನು ಸಂಘಟಿಸುವಂತಹ ಶಕ್ತಿ ದಲಿತ ಪದಕ್ಕಿದೆ. ಈಗಾಗಲೇ ದಲಿತ ಎಂಬ ಪದದಿಂದಲೇ ಒಂದು ಜಾಗೃತಿ ಮೂಡತೊಡಗಿದೆ. ಈ ಹಿನ್ನೆಲೆಯಲ್ಲಿ ದಲಿತ ಎಂಬ ಪದವನ್ನು ಕಾನೂನು ರೀತಿಯಲ್ಲಿಯೇ ನಿಷೇಧ ಏರುವುದಕ್ಕೆ ಮುಂದಾಗಿದ್ದಾರೆ. ಈ ಎಚ್ಚರದ ಸಂದೇಶವನ್ನು ದಲಿತ ಸಾಹಿತ್ಯ ಚಳುವಳಿಯ ಮೂಲಕ ಪಡೆದಿದ್ದೇವೆ. 1960ರ ನಂತರ ದಲಿತ ಸಮುದಾಯದೊಳಗಿನ ವಿದ್ಯಾವಂತ ಸಮೂಹವು ಬರಹಗಾರರಾಗಿ, ಹೋರಾಟಗಾರರಾಗಿ, ಸಂಘಟನ ಕಾರರಾಗಿ ಹೊಸ ಅರಿವನ್ನು ಮೂಡಿಸಿದರು. ಅದರ ಫಲವೇ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ತಿರುಳಾಯಿತು. ಸಾಹಿತ್ಯದ ವಸ್ತುಗಳಾಗಿ ನಾಡಿನ ಅನೇಕರಿಗೆ ಜಡಗೊಳ್ಳುತ್ತಿರುವ ವ್ಯವಸ್ಥೆಯ ವಿರುದ್ಧ ದಲಿತ ಸಂವೇದನೆಯು ದೊಡ್ಡ ಧ್ವನಿಯಲ್ಲಿಯೇ ಪ್ರಶ್ನಿಸಿತು. ಈ ಸಂದರ್ಭದಲ್ಲಿ ದಲಿತ ಸಂವೇದನೆ ಮಾತ್ರ ಬೆಳೆಯಲಿಲ್ಲ. ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆ ಮುಂತಾದ ಸಂವೇದನೆಗಳಿಗೆ ನಾಂದಿ ಹಾಡಿತು. ಈ ಸಂವೇದನೆಗಳು ಮಾತ್ರ ಬೇರೊಂದು ಆಯಾಮಗಳಲ್ಲಿ ಬೆಳೆಯತೊಡಗಿವೆ.

ದಲಿತ ಸಾಹಿತ್ಯ ಎಂದರೆ, 'ದಲಿತರು ದಲಿತರಿಗಾಗಿ ಹಾಗೂ ದಲಿತರಿಗೋಸ್ಕರ ಬರೆದ ಬರಹವೇ ದಲಿತ ಸಾಹಿತ್ಯ'. ದಲಿತೇತರು ದಲಿತರ ಅನುಭವವನ್ನು ಪಡೆದಿರುವುದಿಲ್ಲ ಕಾರಣ ದಲಿತ ಅನುಭವ ಲೋಕದ ಸೃಷ್ಟಿ ಅಷ್ಟಾಗಿ ಲಭಿಸುವುದಿಲ್ಲ ಎಂಬ ವಾದವಿದೆ. ಆದರೂ ದಲಿತ ಸಂವೇದನೆಯ ಹುಟ್ಟನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿ ನೋಡಬಹುದು. ಬಸವಾದಿ ಶರಣರು ವಚನಗಳ ಮುಖೇನ ದಲಿತರ ಉದ್ಧಾರಕ್ಕಾಗಿ ಲೇಖನಿಯ ಹಿಡಿದು ಸಮಾಜಕ್ಕಂಟಿದ ಮೌಢ್ಯತೆಯ ವಿರುದ್ಧ ಕ್ರಾಂತಿ ಸಾರಿದರು. ಮಧುರಸ ಎಂಬ ಬ್ರಾಹ್ಮಣನ ಮಗನಿಗೆ, ಹರಳಯ್ಯ ಎಂಬ ಶೂದ್ರನ ಮಗಳ ಮದುವೆ ಮಾಡಿ ಬಹುದೊಡ್ಡ ವರ್ಣಸಂಕರಕ್ಕೆ ಬಸವಣ್ಣ ಕಾರಣರಾಗಿದ್ದರು. 12ನೇ ಶತಮಾನದಲ್ಲೇ ಜಾತಿ ಮೀರಿದ ನಿಲುವು ತಾಳಿದ್ದರು. ದಲಿತ ಶರಣರಲ್ಲಿ ಮೌಢ್ಯದ ಬಗೆಗಿನ ತಿಳುವಳಿಕೆ, ಅಕ್ಷರ ಜ್ಞಾನ, ಭಕ್ತಿ, ಕಾಯಕನಿಷ್ಠೆ, ಜಾತಿ ಮೀರಿದ ನಡೆ ಮುಂತಾದ ಅಂಶಗಳನ್ನು ದಲಿತರಲ್ಲಿ ತುಂಬಿ ಆತ್ಮವಿಶ್ವಾಸ ಮೂಡಿಸಿದರು. ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಗಳು ಮೊಟ್ಟಮೊದಲಿಗೆ ವಚನಯುಗದಲ್ಲಿ ರೂಪ ಪಡೆದುಕೊಳ್ಳುತ್ತವೆ. ಬಸವಣ್ಣ ಅವರ ಅಂಧ ಶ್ರದ್ಧೆಯ ವಿರುದ್ಧ, ಜಾತಿಯತೆಯ ವಿರುದ್ಧ ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಕ್ರಾಂತಿಯನ್ನೆಬ್ಬಿಸಿದರು. ತಮ್ಮ ಧರ್ಮವನ್ನು ತ್ಯಜಿಸಿ ಮಾನವ ಧರ್ಮಕ್ಕಾಗಿ, ಸರ್ವಜನರ ಕಲ್ಯಾಣಕ್ಕಾಗಿ 'ಅನುಭವ ಮಂಟಪ'ವನ್ನು ಆರಂಭಿಸಿ ಸಮಾನತೆಯ ಬದಲಾವಣೆಗೆ ಹೊಸ ರೂಪವನ್ನು ಕೊಟ್ಟರು.

ನಂತರದಲ್ಲಿ ಬಂದಂತಹ ಕನಕದಾಸರು, ಪುರಂದರದಾಸರು, ಸರ್ವಜ್ಞ, ಸಂತ ಶಿಶುನಾಳ ಶರೀಫರು, ಸೂಫಿ ಕವಿಗಳು ಮುಂತಾದವರು ಸಮಾಜದಲ್ಲಿ ಕಂಡುಬರುವ ಅನಿಷ್ಠ ಪದ್ಧತಿ, ಅಸಮಾನತೆಯ ಸಮಾಜವನ್ನು ಸಮಸಮಾಜವಾಗಿಸಲು ಪ್ರಯತ್ನಪಟ್ಟರು. ವಚನಕಾರರು ಸಾಧಿಸಿದ್ದ ಸಾಮಾಜಿಕ ಚಳುವಳಿ ನಂತರದವರಿಗೆ ಸಿಗಲಿಲ್ಲ. ಅದಕ್ಕೆ ಕಾರಣವಾದದ್ದು ಅಕ್ಷರ ಜ್ಞಾನ. ವಚನಯುಗದಲ್ಲಿ

ಶೂದ್ರ ಜನಾಂಗವು ವಚನಗಳ ರಚನೆಗೆ ಸಾಧ್ಯವಾಗಿದ್ದು, ಕಾಯಕದ ತತ್ವದಡಿಯಲ್ಲಿ ಬಸವತತ್ವವನ್ನು ಪಾಲಿಸಲು ಸಾಧ್ಯವಾಯಿತು. ಬಸವಯುಗದ ನಂತರ ದಲಿತರನ್ನು ಸಾಮಾಜಿಕ ಮುನ್ನೆಲೆಗೆ ತರಲು ಸಾಧ್ಯವಾಗಿಲ್ಲ. ಅಂದರೆ ಶತಮಾನಗಳಿಂದಲೂ ದಲಿತರು ಹಿಂದುಳಿಯುವುದಕ್ಕೆ ಮುಖ್ಯ ಕಾರಣ ಅನಕ್ಷರತೆ. ಇದನ್ನು ಮನಗಂಡ ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟ ಎನ್ನುವ ಮೂರು ಅಂಶಗಳನ್ನು ಮುಂದು ಮಾಡಿ ದಲಿತ ಸಮುದಾಯಗಳನ್ನು ಒಗ್ಗೂಡಿಸಿ ತಮ್ಮ ಹಕ್ಕುಗಳನ್ನು ಕೇಳಿದರು. ಅಂಬೇಡ್ಕರ್‌ರು ಹಾಕಿಕೊಟ್ಟ ಈ ಹಾದಿ ಅನೇಕರಿಗೆ ದಾರಿದೀಪವಾಯಿತು. ಶಿಕ್ಷಣದ ಬಗ್ಗೆ ಅರಿವು ಮೂಡಿತು. ಸಾಹಿತ್ಯದಲ್ಲಿಯೂ ಬಂಡಾಯ-ದಲಿತ ಸಾಹಿತ್ಯ ಚಳುವಳಿಯ ಹುಟ್ಟುವಿಕೆಗೆ ಕಾರಣವಾಯಿತು. ಅಸ್ಪೃಶ್ಯತೆಯ ನಿವಾರಣೆ, ಶೋಷಣೆ ವಿರೋಧಿ, ಕಂದಚಾರ ನಿರ್ಮೂಲನೆ, ಮೌಢ್ಯ ವಿರೋಧಿ, ಸಮಾನತೆಯ ಸಮಾಜವನ್ನು ನಿರ್ಮಿಸಲು ಶಿಕ್ಷಣ ಅವಶ್ಯಕವಾಗಿತ್ತು. ಅಕ್ಷರದಿಂದ ತಿಳುವಳಿಕೆಯನ್ನು ಪಡೆಯುವ ಆ ಮೂಲಕ ಜಡ ಸಮಾಜದ ವಿರುದ್ಧ, ಪುರೋಹಿತಶಾಹಿತನ ವಿರುದ್ಧ, ಶೋಷಿಸುವುದರ ವಿರುದ್ಧ ಸೆಟೆದು ನಿಲ್ಲುವಂಥ, ಪ್ರಶ್ನಿಸುವಂತಹ ಗುಣವನ್ನು ಪಡೆಯುವ ಸಾಮರ್ಥ್ಯವನ್ನು ಕೊಡುವುದೇ ದಲಿತ ಸಾಹಿತ್ಯದ ಗುರಿಯಾಗಿತ್ತು. ಅದನ್ನು ಸಮಾಜದಲ್ಲೂ ಮತ್ತು ಸಾಹಿತ್ಯದ ಒಳಗೆ ಪ್ರತಿಪಾದಿಸಿದರು. ಬಹುತೇಕ ಎಲ್ಲಾ ದಲಿತ ಬರಹಗಾರರಿಗೂ ತಾವು ಹುಟ್ಟಿನಿಂದ ಪಡೆದುಕೊಂಡ ಅನುಭವವು ಅವರ ಬರಹಗಳನ್ನು ಪ್ರಖರವಾಗಿಸಿತು. ದಲಿತ, ಶೂದ್ರ ಬದುಕಿನ ಕರಾಳತೆಯ ಜೀವನವನ್ನು ಅನಾವರಣಗೊಳಿಸಿತು. ಅನೇಕ ಶಿಕ್ಷಿತ, ಅಶಿಕ್ಷಿತ ಜನರ ಅನುಭವವೇ ತುಂಬಿದ್ದ ದಲಿತ ಸಾಹಿತ್ಯ ಸಮಾಜದ ಮೌಢ್ಯದ ಕಣ್ಣು ತೆರೆಸಲು ಭದ್ರಬುನಾದಿ ಹಾಕಿಕೊಟ್ಟಿತ್ತು. ಆದರೆ ಇವು ಒಮ್ಮೆಲೆ ಪರಿವರ್ತನಾ ಹಾದಿಗೆ ಮರಳಲಿಲ್ಲ. ಶತಶತಮಾನ ಗಳಿಂದಲೂ ಸಮಾಜದಲ್ಲಿರುವ ಅಸ್ಪೃಶ್ಯತೆ, ಆಸಮಾನತೆ, ಜಾತಿಯತೆ, ತಾರತಮ್ಯವನ್ನು ಬಹುಜತನದಿಂದಲೇ ಬೆಳೆಸಿಕೊಂಡು ಬಂದಿದ್ದ ಅಧಿಕಾರಯುತ ವ್ಯವಸ್ಥೆಗಳು ಜಾತಿ ಆಚರಣೆಗಳನ್ನು ಕಾಪಾಡಿಕೊಂಡೇ ಬಂದವು. ಸಮಾಜ ಪರಿವರ್ತನಾ ಹರಿಕಾರರಾದ ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ವಿಚಾರಧಾರೆಗಳು ಸಹ ಅನೇಕ ವರ್ಷಗಳ ಕಾಲ ನೆನೆಗುದಿಗೆ ಬೀಳುವಂತೆ ಮಾಡಿದರು. ಎಲ್ಲಿ ಸಮಾಜವನ್ನು ಎಚ್ಚರಿಸುವ ಕೆಲಸಗಳು ನಡೆದಿದ್ದವೋ ಅಂತಹ ತತ್ವಗಳನ್ನು ಮುಚ್ಚುಮರೆ ಮಾಡಿದ್ದರು. ಅಂಬೇಡ್ಕರ್ ಅವರ ಬರಹಗಳು ಮುದ್ರಣ ರೂಪ ಕಂಡಿದ್ದು ಸಹ ತೀರಾ ಈಚೇಗೆ. ಆಧುನಿಕತೆಯ ವೈರುಧ್ಯವೆಂದರೆ ಮೊದಲ ಬಾರಿಗೆ ಸಮಾಜದಲ್ಲಿ ಬುದ್ಧ, ಬಸವಣ್ಣ ಸಮಾನತೆಯ ಬೀಜವನ್ನು ಬಿತ್ತಿದವರು, ಸಮಾನತೆಯ ನೆಲೆಗಟ್ಟಿನ ಮೇಲೆ ನವಸಮಾಜವನ್ನು ಕಟ್ಟ ಬಯಸಿದವರು. ಆದರೆ ಇಂದು ಅವರನ್ನು ಒಂದು ಜಾತಿ ಮತ್ತು ಧರ್ಮದ ವ್ಯವಸ್ಥೆಯ ಹೆಸರಿನಲ್ಲಿ ನಿಲ್ಲಿಸಿರುವುದು ಬಹುಶೋಚನೀಯವಾಗಿದೆ.

ದಲಿತ ಎಂದರೆ ಹಲವಾರು ಭಾಷೆಗಳಲ್ಲಿ ಹಲವು ವ್ಯಾಖ್ಯಾನ ನೀಡಲಾಗಿದೆ. ದಲಿತ ಪದವು ಸಂಸ್ಕೃತ ಪದವಾದರೂ, ಮರಾಠಿ ಮೂಲದಿಂದ ಬಂದ ಪದವಾಗಿದೆ. ಸಂಸ್ಕೃತದಲ್ಲಿ ತುಳಿತಕ್ಕೊಳಗಾದವರು ಅಥವಾ ತುಳಿಯಲ್ಪಟ್ಟವರು (ಕ್ರಷ್ಡ್) ಎನ್ನುವ ಅರ್ಥಕೊಡುತ್ತದೆ. ಇದನ್ನು ಇಂಗ್ಲೀಷ್ ಪದಕೋಶದಲ್ಲಿ ಗ್ರೌಂಡ್ (ತಳ್ಳಲ್ಪಟ್ಟವರು) ಅಥವಾ ಬ್ರೋಕನ್ (ದಮನ) ಎನ್ನುವ ಅರ್ಥವಿದೆ. ಪ್ರಾಚೀನ ಕಾಲದಲ್ಲಿ ಚಾತುರ್ವರ್ಣ್ಯದ ಪದ್ಧತಿಯಿತ್ತು. ಶೂದ್ರರನ್ನು ಮಾತ್ರ ಅಸ್ಪೃಶ್ಯರನ್ನಾಗಿಸಿ ಶೋಷಿಸುತ್ತಿದ್ದರು. ಕಾಲಾನಂತರದಲ್ಲಿ ಜಾತಿಗಳಲ್ಲಿ ಅನೇಕ ಜಾತಿಗಳಾಗಿ ಸೃಷ್ಟಿಸಿಕೊಂಡ ಮನುಷ್ಯ ತಮ್ಮ ಅಸ್ತಿತ್ವಕ್ಕಾಗಿ ಜಾತಿಗಳನ್ನು ಹುಟ್ಟುಹಾಕಿದನು. ಮೇಲ್ಜಾತಿ ಕೇಳಜಾತಿ ಎನ್ನುವ ದೊಡ್ಡ ಕಂದರಗಳನ್ನು ಸೃಷ್ಟಿಸಿ ಮನುಷ್ಯ ಮನುಷ್ಯನನ್ನೇ ಅಡಿಯಾಳಾಗಿಸಿ ಕೊಂಡನು. ಜಾತಿ, ವರ್ಣ, ವೃತ್ತಿ, ಧರ್ಮ, ಆಚರಣೆಗಳ ಮೂಲಕ ಅಂತರಗಳು ನಿರ್ಮಾಣಗೊಂಡವು. ಇದರಿಂದಾಗಿ ಸಮಾಜದಲ್ಲಿ ಅಸಮಾನತೆ ಹೆಚ್ಚಾಯಿತು. ಈ ಅಸಮಾನತೆಯಿಂದ ಕ್ರೋಧಗೊಂಡ ಅನೇಕ ತಳಸಮುದಾಯಗಳು ತಮ್ಮ ಹಕ್ಕಿನ ಪ್ರಶ್ನೆ, ಉಳುವಿನ ಪ್ರಶ್ನೆ, ಏಳ್ಗೆಯ ಪ್ರಶ್ನೆಗಳನ್ನು ಮುಂದುಮಾಡಿ ಹೋರಾಟಕ್ಕೆ ನಿಂತರು. ಇಂತಹ ತಳಸಮುದಾಯಗಳ ಒಟ್ಟುಗೂಡುವಿಕೆಗೆ ದಲಿತ ಎಂಬ ಪದ ಅತ್ಯಂತ ಮಹತ್ವದ ಪಾತ್ರವಹಿಸಿದೆ. ದಲಿತ ಚಳುವಳಿಯ ಹೋರಾಟಗಾರರು ತಮ್ಮದೇ ಅನುಭಾವಿಕೆಯಲ್ಲಿ ಯಾರು ದಲಿತರು ಎಂಬುದಕ್ಕೆ ಕೆಲವು ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಮರಾಠಿ ಲೇಖಕರಾದ ಗಂಗಾಧರ ಪಂಟವಾಣೆ ಅವರು ದಲಿತ ಪದದ ಅರ್ಥವಿಸ್ತಾರವನ್ನು ಹೀಗೆ ವಿಸ್ತರಿಸಿದ್ದಾರೆ:

> **ನನಗೆ, ದಲಿತ ಒಂದು ಜಾತಿ ಅಷ್ಟೇ ಅಲ್ಲ. ಈ ದೇಶದ ಸಂಪ್ರದಾಯದ ಚೌಕಟ್ಟಿನಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿತನಾಗಿರುವವನು. ಇವನಿಗೆ ದೇವರು, ಪುನರ್ಜನ್ಮ, ಪವಿತ್ರ ಗ್ರಂಥಗಳ ಪಾಠ, ಹಣೆಬರಹ, ಸ್ವರ್ಗ-ನರಕ ಇವ್ಯಾವುಗಳಲ್ಲಿ ನಂಬಿಕೆ ಇಲ್ಲ. ಯಾಕೆಂದರೆ ಅವೆಲ್ಲ ಇವನನ್ನು ಗುಲಾಮನ್ನಾಗಿ ಮಾಡಿವೆ. ಇವನಿಗೆ ಮಾನವೀಯತೆಯಲ್ಲಿ ಮಾತ್ರ ನಂಬಿಕೆ. ಬದಲಾವಣೆಯ ಮತ್ತು ಕ್ರಾಂತಿಯ ಸಂಕೇತವೇ ದಲಿತ.** ಎಂದಿದ್ದಾರೆ.

ಗಂಗಾಧರ ಪಂಟವಾಣಿಯವರು ಅಸ್ಮಿತ ದರ್ಶ (ಮಿರರ್ ಅಫ್ ಐಡೆಂಟಿ) ಸ್ಥಾಪಕರು, ಮರಾಠಿ ದಲಿತ ಸಾಹಿತ್ಯದಲ್ಲಿ ಪ್ರಮುಖರು. ಹೋರಾಟದ ಹಿನ್ನೆಲೆಯವರು. ದಲಿತ ಎಂದರೆ ಒಂದು ಜಾತಿ ಅಲ್ಲ ಶೋಷಣೆಗೆ, ತುಳಿತಕ್ಕೊಳಗಾದ ವರೆಲ್ಲರೂ ದಲಿತರೆಂದಿದ್ದಾರೆ. ಮೇಲ್ಜಾತಿಯ ತುಳಿತಕ್ಕೆ ಒಳಗಾದ ಸಮುದಾಯಗಳು ಒಂದೆರಡಲ್ಲ. ಭಾರತದ ತುಂಬೆಲ್ಲಾ ಇವೆ. ಅವುಗಳನ್ನು ದಲಿತ ಸಮುದಾಯದೊಳಗೆ ತಂದು ಸಂಘಟಿಸಿ ಶೋಷಣೆಯ ವಿರೋಧಿ ಹೋರಾಟಗಳನ್ನು ಯಶಸ್ವಿಯಾಗಿ ಅನೇಕ ದಲಿತ ಹೋರಾಟಗಾರರು ಮಾಡಿದ್ದರು. ಪ್ರಾದೇಶಿಕತೆ, ಭಾಷೆ, ರಾಜ್ಯ, ದೇಶಗಳ ಗಡಿಮೀರುವ ಹೋರಾಟವಾಗಿ ಸೃಷ್ಟಿಗೊಂಡಿತು. ದಲಿತ ಸಾಹಿತ್ಯಕ್ಕೆ ಇನ್ನಷ್ಟು ನೈಜತೆಯನ್ನು ತಮ್ಮ ಅನುಭಾವದ ಮೂಲಕ ವಸ್ತುನಿಷ್ಠತೆಯನ್ನು ಕೊಟ್ಟು ದಲಿತರ ಉದ್ಧಾರಕ್ಕಾಗಿ, ಸಾಮಾಜಿಕ ಸಮಾನತೆಗಾಗಿ,

ನ್ಯಾಯಕ್ಕಾಗಿ ಸಾಹಿತ್ಯ ಮುಖೇನ ಮೇಲ್ವರ್ಗದ ವಿರುದ್ಧ ಬಂಡೇಳಲು, ಸಿಡಿದೇಳಲು, ಜನರನ್ನು ಬಡಿದು ಎಚ್ಚರಿಸಿದ್ದಾರೆ ಹಾಗೂ ದಲಿತ ಸಾಹಿತ್ಯಕ್ಕೆ ತಮ್ಮದೇ ಅದ ಕೊಡುಗೆಗಳನ್ನು ನೀಡಿದ್ದಾರೆ. ಅಂತಹವರಲ್ಲಿ ಬಸವಣ್ಣ. ಜ್ಯೋತಿಬಾ ಪುಲೆ(1827-1890), ಡಾ. ಬಿ.ಅರ್. ಅಂಬೇಡ್ಕರ್(1891-1956), ಪ್ರೊ. ಬಿ. ಕೃಷ್ಣಪ್ಪ, ಗೋಪಾಲಸ್ವಾಮಿ ಅಯ್ಯರ್, ವೆಂಕಟರಮಣಪ್ಪ, ತಗಡೂರು ರಾಮಚಂದ್ರ ರಾಯರು, ಕುದ್ಮಲ್ ರಂಗರಾಯರು, ವಿಜಾಪುರದ ಶಾಶಾ ಕಾರ್ಖಾನಿಸ್, ಹರ್ಡೇಕರ್ ಮಂಜಪ್ಪ, ಕಾರ್ನಾಡ್ ಸದಾಶಿವರಾವ್, ಸಿ.ಆರ್.ರೆಡ್ಡಿ ಮೊದಲಾದವರು ಕೆಳಸಮುದಾಯದವರಲ್ಲಿ ಹುಟ್ಟಿಸಿದ ಕ್ರಾಂತಿಕಾರಕ ಮನೋಭಾವವು ಅನೇಕರಲ್ಲಿ ಜಾಗೃತಿಮೂಡಿಸಿತು. ಮುಂದೆ ಕರ್ನಾಟಕದಲ್ಲಿ ಬಂಡಾಯದ ಹುಟ್ಟುವಿಕೆಗೆ ಕಾರಣವಾಯಿತು. 1969ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರ ನೇತೃತ್ವದಲ್ಲಿ ಎಲ್.ಜಿ. ಹಾವನೂರು ಮಂಡಿಸಿದ ವರದಿಯ ಜಾರಿಗಾಗಿ 1969ರಲ್ಲಿ ಅಂಬೇಡ್ಕರ್ ಜನ್ಮದಿನದಂದು ಒಂದು ನಿರ್ದಿಷ್ಟ ಕಾರಣಕ್ಕಾಗಿ ದಲಿತ ಬುದ್ಧಿಜೀವಿಗಳೆಲ್ಲ ಒಂದುಗೂಡಿದ್ದರು.

ದಲಿತ ಹೋರಾಟಗಳ ಬೆಳಕಿನ ಜ್ಯೋತಿಯನ್ನು ಬೆಳಗಿಸಿದ ಅನೇಕ ದಲಿತ ಹೋರಾಟಗಾರರಿಗೆ ಪ್ರೇರಕ ಶಕ್ತಿಯಾದದ್ದು ಮಹಾಮಾನವತಾವಾದಿ, ದಲಿತರ ಮೆಸ್ಸಿಯ್ ಎಂದು ಕರೆಸಿಕೊಂಡ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು. ದಲಿತರ ಶೋಷಣೆಯ ವಿರುದ್ಧ ದನಿಯಾದರು ಮಾತ್ರವಲ್ಲದೆ; ದಲಿತ ಸಾಹಿತ್ಯಕ್ಕೆ ನಾಂದಿ ಹಾಡುವ ಮೂಲಕ ಅಂಬೇಡ್ಕರ್ ಸ್ವತಃ ದಲಿತ ಚಳಿವಳಿಯ ನೇತೃತ್ವ ವಹಿಸಿಕೊಂಡರು. ಸಾಂವಿಧಾನಿಕವಾಗಿ ಶತಮಾನಗಳಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ದಲಿತರಿಗೆ ವಿನಾಯಿತಿಯನ್ನು ಒದಗಿಸಿ ಹಕ್ಕುಗಳನ್ನು ದೊರಕುವಂತೆ ಮಾಡಿದರು. ಶಿಕ್ಷಣಕ್ಕೆ ಸಮಾನತೆಯನ್ನು ಒದಗಿಸಿದ ಮಹಾಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಅವರು ದಲಿತ ಕುಟುಂಬವೊಂದರಲ್ಲಿ ಜನಿಸಿದವರು. ದಲಿತರ ಎಲ್ಲಾ ರೀತಿಯ ಅವಮಾನಗಳನ್ನುಂಡು, ಅಸ್ಪೃಶ್ಯತೆ, ಅಸಮಾನತೆಗಳನ್ನು ಜೀರ್ಣಿಸಿಕೊಂಡು, ಮಹಾಮಾನವತಾವಾದಿಯಾಗಿ ದಲಿತರ ಉದ್ಧಾರಕ್ಕಾಗಿ ಒಂದು ಹೊಸ ಶಕೆಯನ್ನು ಅರಂಭಿಸಿದರು. ಗಾಂಧೀಜಿಯವರು ಬ್ರಿಟಿಷರೇ ಭಾರತ ದೇಶವನ್ನು ಬಿಟ್ಟುತೊಲಗಿರಿ ಎಂದು ಚಳುವಳಿ ಮಾಡುತ್ತಿದ್ದಾಗ, ಅಂಬೇಡ್ಕರ್ ಅವರು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಿದ್ದರು. ದಲಿತ ಹೋರಾಟದ ಭಾಗವಾಗಿ ಹಿಂದೂಗಳೇ ನಮಗೆ ಕುಡಿಯಲು ನೀರುಕೊಡಿ, ದೇವಸ್ಥಾನದ ಒಳಗೆ ಬೀಡಿ, ಸಮಾನತೆ ನೀಡಿ ಮುಂತಾದ ಹಕ್ಕೋತ್ತಾಯಗಳಿಗಾಗಿ ಚಳುವಳಿ ಮಾಡಿದರು. ಅಂಬೇಡ್ಕರ್ ಅವರಿಗೆ ಬ್ರಿಟಿಷರಿಗಿಂತ ಶತಮಾನಗಳಿಂದಲೂ ಜಾತಿ ಆಧಾರದ ಮೇಲೆ ಸಮಾಜವನ್ನು ಕಟ್ಟಿದ್ದ ಹಿಂದೂಧರ್ಮದ ಒಳಗಿನ ಶೋಷಿಸುವ ಮನಸ್ಸುಗಳ ಮೇಲೆ ದೂರಾಲೋಚನೆ ಇತ್ತು. ಇಂಗ್ಲಿಷರಿಂದ ಸಾಮಾಜಿಕವಾಗಿ ಶಿಕ್ಷಣ, ಆಡಳಿತ, ಸೇನೆ, ರಾಜಕೀಯದಲ್ಲೂ ಪ್ರಾತಿನಿಧ್ಯ ದೊರೆಯುವಂತಾಗಿತ್ತು. ಇದು ಮತ್ತೆ ಧಾರ್ಮಿಕ ಮನೋಭಾವನೆಗಳ ಕೈಗೆ ದೇಶ ಸಿಕ್ಕರೇ ದಲಿತರ ಸ್ಥಿತಿಗತಿಗಳು ಘೋರವಾಗುವುದನ್ನು ಮನಗಂಡಿದ್ದರು. ಈ ಕಾರಣಕ್ಕಾಗಿ ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲೂ ದಲಿತ ವಿಮೋಚನೆ, ಅಸ್ಪೃಶ್ಯ ನಿವಾರಣೆ, ಮೌಢ್ಯ ವಿರೋಧಿ ಆಚರಣೆಗಳ ವಿರುದ್ಧ ದನಿ ಎತ್ತಿದರು. ದೇಶದ ಆಂತರಿಕವಾಗಿ ಪ್ರಜೆಗಳಲ್ಲಿ ಸ್ವಾತಂತ್ರ್ಯದ ಅಗತ್ಯವಿತ್ತು. ಹೀಗಾಗಿ ಕಾನೂನಾತ್ಮಕವಾಗಿ ಮೀಸಲಾತಿಯನ್ನು ಕೊಟ್ಟು ದಲಿತರ ಶಿಕ್ಷಣಕ್ಕೆ ಒತ್ತುಕೊಟ್ಟರು. ಅವರ ಚಿಂತನೆಗಳು ವಿಚಾರಗಳು ಯಾವುತ್ತೂ ಶೋಷಿತ ಸಮಾಜಕ್ಕೆ ಅದರ್ಶವಾಗಿವೆ. ಅಂಬೇಡ್ಕರ್ ಅವರ ದಲಿತರಿಗೆ ಒಗ್ಗಟ್ಟಾಗಿರಿ ಹಾಗೂ ಶಿಕ್ಷಣವನ್ನು ಪಡೆಯಿರಿ ಎಂದು ಕರೆಕೊಟ್ಟರು. ಅಂಬೇಡ್ಕರ್ ಅವರ ಅನ್ನಿಹಿಲೇಶನ್ ಆಫ್ ಕ್ಯಾಸ್ಟ್ (ಜಾತಿ ವಿನಾಶ) ಎನ್ನುವ ಶೀರ್ಷಿಕೆಯಡಿ ತಮ್ಮ ಭಾಷಣವನ್ನು ಮೇಲ್ವರ್ಗದ/ಶ್ರೀಮಂತವರ್ಗದ ವಿರುದ್ಧ ಬ್ರಾಹ್ಮಣರ ಗ್ರಂಥಗಳ ವಿರುದ್ಧ ಸಂಪ್ರದಾಯಗಳ ವಿರುದ್ಧ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಕಿಡಿಕಾರಿದ್ದರು. ಜಾತಿಯತೆ ನಿರ್ಮೂಲನೆ ಆಗಬೇಕಾದರೆ ಅಂತರ್‌ಜಾತಿ ವಿವಾಹಗಳೊಂದೇ ಸಾಲದು, ಪೊಳ್ಳು ಸಂಪ್ರದಾಯಗಳು ಸುಟ್ಟು ಹಾಕಲ್ಪಡಬೇಕು. ಆಡಳಿತಶಾಹಿ ವರ್ಗಗಳು ಅಮಾನುಷವಾಗಿ ದಲಿತರನ್ನು ನಡೆಸಿಕೊಳ್ಳುವ ಪರಿ ಬದಲಾಗಬೇಕು ಹಾಗೂ ಸುಶಿಕ್ಷಿತರಾಗಿ ಭವ್ಯ ಭಾರತವ ಕಟ್ಟಿ ಎಂಬುದು ಅವರ ನಿಲುವಾಗಿತ್ತು. ದಲಿತರ ಜೀವನದಲ್ಲಿ ಬದಲಾವಣೆಯನ್ನು ಎರಡು ಮಾರ್ಗಗಳಿಂದ ತರಬಹುದು ಎಂದಿದ್ದರು. ಒಂದು ಬುಲೆಟ್ಟಿನಿಂದ; ಇನ್ನೊಂದು ಬ್ಯಾಲೆಟ್ಟಿನಿಂದ. ಬುಲೆಟ್ಟಿಗಿಂತ ಬ್ಯಾಲೆಟ್ಟೇ ಹೆಚ್ಚು ಪರಿಣಾಮಕಾರಿ. ಆದ್ದರಿಂದ ಕೆಳಜಾತಿಗಳು ತಮ್ಮ ಮತಶಕ್ತಿಯಿಂದ ಬದಲಾವಣೆಯನ್ನು ತರಬೇಕೆಂದು ಕರೆ ನೀಡಿದರು. ಈ ನೆಲದ ಮನುಷ್ಯ ವಿರೋಧಿ ನಿಲುವುಗಳಿಗೆ ಮಾತೃಕೆಯಾದ ಧರ್ಮ, ಜಾತಿ, ವರ್ಣವ್ಯವಸ್ಥೆ, ಮೌಢ್ಯ, ಮೂಲಭೂತವಾದಂತಹ ಷಂಡತನ, ಶೋಷಣೆಗಳ ವಿರುದ್ಧ ಅಸ್ತ್ರವೆಂದರೆ ಪ್ರಜಾಪ್ರಭುತ್ವ. ಈ ಪ್ರಭುತ್ವಕ್ಕಿರುವ ಮತ್ತೊಂದು ಬಲವಾದ ಆಯುಧವೆಂದರೆ 'ಮತದಾನ . ಈ ನಿಟ್ಟಿನಲ್ಲಿ ತಳಸಮುದಾಯಗಳು ಒಗ್ಗೂಡಿ ಬಹುತ್ವವನ್ನು ಒಳಗೊಳ್ಳುವಂತಹ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕು.

ಇತ್ತೀಚಿನ ದಿನಗಳಲ್ಲಿ ದಲಿತಪರ ಧ್ವನಿಯಾದವರು ಕಾಂಚ ಐಲಯ್ಯ. ಇವರು ವೈ ಐಯಾಮ್ ನಾಟ್ ಎ ಹಿಂದು? ಎನ್ನುವ ಶಿರ್ಷಿಕೆಯಡಿ, ತಾನು ಹಿಂದುವಾಗಿ ಯಾಕೆ ಹುಟ್ಟಿದೆ? ಎಂದು ಪ್ರಶ್ನಿಸಿಕೊಳ್ಳುವ ಮುಖೇನ ದಲಿತರಪರ ಧ್ವನಿಯಾಗಿ, ಬ್ರಾಹ್ಮಣಶಾಹಿಯ, ಹಿಂದುತ್ವದ ವಿರುದ್ಧ ಸಿಡಿದೆದ್ದರು. ಜಾತಿವ್ಯವಸ್ಥೆಯು ಒಂದು ಸಾಮಾಜಿಕ ಅನಿಷ್ಟ ಪದ್ಧತಿಯಾಗಿದ್ದು, ಅನಾದಿಕಾಲದಿಂದಲೂ ಬಂದಿದ್ದು ಅದನ್ನು ನಿರ್ಮೂಲನೆ ಮಾಡಬೇಕು. ಸ್ವಸ್ಥ ಸಮಾಜವನ್ನು ಕಟ್ಟಬೇಕು ಹಾಗೂ ಪರಿವರ್ತನೆಯಿಂದ ಜಾಗೃತಗೊಳ್ಳಬೇಕು. ಕಾಂಚ ಐಲಯ್ಯ ಅವರು ಭಾರತ ಸಮಾಜವು ಕೆಟ್ಟ ಅನಿಷ್ಟ ಪದ್ಧತಿ ಪ್ರತೀಕವಾಗಿದೆ. ಏಕೆಂದರೆ ಅಡಳಿತಶಾಹಿ ಕೇಂದ್ರವಾಗಿರುವ ಮೇಲ್ವರ್ಗದವರು ಇಂದು ಕೆಳವರ್ಗದವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ವಸಾಹತುಶಾಹಿ ಮೂಲಕ ಬ್ರಾಹ್ಮಣರು ತಮ್ಮ ವೇದದಲ್ಲಿರುವಂತೆ ವರ್ಣವ್ಯವಸ್ಥೆಯನ್ನು(ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರ) ಬೆಳೆಸಿದರು ಹಾಗೂ ದಲಿತರನ್ನು

ಶೋಷಿಸಿದರು, ದಲಿತರನ್ನು ಕಡೆಗಾಣಿಸಿದರು; ಹಾಗೂ ಅವರನ್ನು ಅಮಾನವೀಯವಾಗಿ ತುಳಿದರು. ಶೂದ್ರ ರೆಂದರೆ ಅಸ್ಪೃಶ್ಯರು, ಮುಟ್ಟಲಿಕ್ಕೆ ಯೋಗ್ಯರಲ್ಲದವರು, ಮಲಹೋರುವವರು, ಅಮಾನುಷರು(ನಾನ್ ಹ್ಯೂಮನ್‌ಬೀಯಿಂಗ್ಸ್) ಎಂದು ಬ್ರಾಹ್ಮಣರು ಉಲ್ಲೇಖಿಸಿದರು. ಕಾಂಚ ಐಲಯ್ಯ ಅದಕ್ಕಾಗಿ ಬದಲಾವಣೆಯ ಕಡೆ ಮುಖಮಾಡಿ, ಹೊಸತನ್ನು ಸ್ವೀಕರಿಸಿ ಸಾಯುವವರೆಗೂ ನಿಮ್ಮನ್ನು ಈ ಪುರೋಹಿತಶಾಹಿಗಳು ಕಿತ್ತು ತಿನ್ನುತ್ತಾರೆ. ನಿಮ್ಮನ್ನು ತುಳಿಯುತ್ತಾರೆ. ನೀವು ಬಲಹೀನರಲ್ಲ. ಏಳಿ ಎದ್ದೇಳಿ ಎಚ್ಚರವಾಗಿರಿ ಎಂದು ಹೇಳುವುದರ ಮೂಲಕ ಸಿಡಿದೇಳಿಸಿ ಹೊಸ ಅಲೆಯನ್ನು ಎಬ್ಬಿಸಿ, ಹೊಸ ಚೇತನಕ್ಕೆ ಮುನ್ನುಡಿ ಬರೆಯಿರಿ ಎಂದು ಐಲಯ್ಯ ದಲಿತರಿಗೆ ಕರೆಕೊಟ್ಟರು. ಹಾಗೆಯೇ ಹೊಲೆಯ, ಮಾದಿಗ ಇತ್ಯಾದಿ ಒಳಜಾತಿಗಳು ಹಾಗೂ ಇತರ ಹಿಂದುಳಿದ ಜಾತಿಗಳ ನಡುವಿನ ವೈಮನಸ್ಸಿನ ಗೋಡೆ ಒಡೆದು ಪ್ರೀತಿ, ಸಮಾನತೆ ಇರುವ ಬಹುಜನ ಸಮಾಜ ನಿರ್ಮಾಣಕ್ಕಾಗಿ ಶೋಷಿತರೆಲ್ಲರೂ ಒಂದಾಗಿ ಸ್ವತಂತ್ರ ರಾಜಕೀಯದ ಶಕ್ತಿಯಾಗಬೇಕು ಎಂಬುದು ಅವರ ವಿಚಾರಧಾರೆಯಾಗಿದೆ. ಕಾಂಚ ಐಲಯ್ಯ ಅವರು ಡಾ.ಬಿ.ಅರ್.ಅಂಬೇಡ್ಕರ್ ಅವರು ಜಾತಿ ವಿನಾಶ (ಅನ್ನಿಹಿಲೇಶನ್ ಆಫ್ ಕ್ಯಾಸ್ಟ್)ಸ್ಫೂರ್ತಿಗೊಂಡು, ಜಾತಿಯನ್ನು ನಿರ್ಮೂಲನೆಗೆ ಹೊಸ ಆಧ್ಯಾಯ ಬರೆದರು. ನಿಮ್ಮ ಬದುಕಿಗೆ ನೀವೇ ಹೊಸ ಅಧ್ಯಾಯ ಬರೆಯುವಂತಾಗಬೇಕು ಎಂದಿದ್ದಾರೆ.

ಪ್ರೊ.ಬಿ.ಕೃಷ್ಣಪ್ಪರವರು, ದಲಿತ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಗಾಧವಾದುದು. ಬಿ.ಕೃಷ್ಣಪ್ಪ ಅವರ ಸಾಹಿತ್ಯ ಚಿಂತನೆ, ಸಂಘಟಿಸಿದ ರೀತಿ ಮತ್ತು ಹೋರಾಟದ ಮನೋಭಾವವು ದಲಿತ ಮತ್ತು ಕೆಳವರ್ಗದ ಹಿತದೃಷ್ಟಿಯನ್ನು ಒಳಗೊಂಡಿತ್ತು. ದಲಿತರಾಗಿ ಕಡುಬಡತನದಲ್ಲಿ ಹುಟ್ಟಿ ಎಲ್ಲಾ ಅಸ್ಪೃಶ್ಯತೆಯ ಮಜಲುಗಳನ್ನು ಕಂಡು ಬಸವಳಿದು ದಲಿತರಪರ ದನಿಯಾಗಿ ಅಮಾನುಷ, ಮೃಗೀಯ, ಅನಾಗರಿಕ ಎಂದೆನಿಸಿಕೊಳ್ಳುವ ಬೆತ್ತಲೆ ಸೇವೆಯ ವಿರುದ್ಧ ಗರಿಗೆದರಿ ಅದನ್ನು ನಿಲ್ಲಿಸಿದ ಹಿರಿಮೆ ಬಿ.ಕೃಷ್ಣಪ್ಪ ಅವರಿಗೆ ಸಲ್ಲುತ್ತದೆ. ಅಲ್ಲದೇ ಅಂಬೇಡ್ಕರ್‌ರಂತೆ ದಲಿತ ಬದುಕನ್ನು ಪರಿವರ್ತಿಸುವ ಸಾಧನ ಶಿಕ್ಷಣವೆಂದು, ದಲಿತರ ಶಿಕ್ಷಣಕ್ಕಾಗಿ ರಾಜ್ಯಾದ್ಯಂತ ಸುತ್ತಾಡಿ ದಲಿತ ಸಮುದಾಯಗಳನ್ನು ಒಗ್ಗೂಡಿಸಿ ಶ್ರಮಿಸಿದರು. ದಲಿತ ಸಂಘರ್ಷ ಸಮಿತಿಗಳನ್ನು ಕಟ್ಟಿ ಆ ಮೂಲಕ ದಲಿತ ಸಮುದಾಯಗಳಿಗೆ ಸಲ್ಲುವಂತಹ ಹಕ್ಕುಗಳಿಗೆ ತೀವ್ರ ಚಳುವಳಿಯನ್ನು ಮಾಡಿದರು.

ಪ್ರಸ್ತುತ ದಿನಗಳಲ್ಲಿ ದಲಿತ ಸಾಹಿತ್ಯವನ್ನು ವೈಚಾರಿಕತೆಯ ನೆಲೆಯಲ್ಲಿ ವೈಚಾರಿಕ ಮನೋಭಾವ, ಮನೋಧರ್ಮವನ್ನು, ಮಡುಗಟ್ಟಿದ ಅಂಧ ಆಚರಣೆಗಳ ವಿರುದ್ಧ ಧ್ವನಿಯಾದವರನ್ನು ಧರ್ಮ ವಿರೋಧಿಗಳೆಂದು ವಿರೋಧಿಸುವ, ಹತ್ಯೆ ಮಾಡುವ ಪರಿಯು ಅಮಾನವೀಯವಾಗಿದೆ. ಒಬ್ಬ ವ್ಯಕ್ತಿಯು ಧಾರ್ಮಿಕತೆಯ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳದೇ ಆರೋಗ್ಯವಂತ ಮನಃಸ್ಥಿತಿಯವನಾಗಲು ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿ ದೇಶವ್ಯಾಪಿ ನಿರ್ಮಾಣವಾಗಿದೆ. ಸತ್ಯ ತಿಳಿದವನು ಸತ್ತ ಹಾಗಿರಬೇಕು ಎಂಬ ಸರ್ವಜ್ಞನ ವಚನದ ಅಂತರಾರ್ಥವು ನಮಗೆ ಈಗ ತಿಳಿಯುತ್ತದೆ. ಧರ್ಮ ಮತ್ತು ರಾಜಕೀಯಗಳು ಬೆರೆತು ಪ್ರಜಾಪ್ರಭುತ್ವದ ಬುನಾದಿಯನ್ನು ಕಾನೂನಾತ್ಮಕವಾಗಿ ಅಲುಗಾಡಿಸುವ ಹುನ್ನಾರುಗಳು ಇಂದು ಭಾರತದಲ್ಲಿ ನಡೆಯುತ್ತಿವೆ. ಎಂಥದೇ ವೈಜ್ಞಾನಿಕ ಸಿದ್ಧಾಂತವಿದ್ದರೂ ಅದು ಒಪ್ಪಿಕೊಳ್ಳಲಾಗದೆ, ಅಸತ್ಯವ ಬೆನ್ನಟ್ಟುವ ಪರಿ, ಭಯದ ನೆಲೆ ಇಂದು ತಲೆದೋರುತ್ತಿದೆ. ಅಂಬೇಡ್ಕರ್ ಅವರು ಅಂತರ್‌ಜಾತಿಯ ವಿವಾಹದಿಂದ ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯಲು ಚಿಂತಿಸಿದರು. ಆದರೆ ಇಂದು ಅಂತರ್‌ಜಾತಿಯ ವಿವಾಹಗಳು ಮರ್ಯಾದಾ ಹತ್ಯೆಗಳಾಗಿವೆ, ದಲಿತರ ಕಗ್ಗೊಲೆಗಳಾಗಿ ಸಂಭವಿಸುತ್ತಿವೆ. ಮನುಷ್ಯನಲ್ಲಿನ ಧಾರ್ಮಿಕ ಭಾವನೆಗಳನ್ನೇ ಗುರಿಯಾಗಿಸಿಕೊಂಡು ಕೆಲವೇ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಸಾಧಿಸಹೊರಟಿವೆ. ಧರ್ಮ-ಧರ್ಮಗಳ ನಡುವೆ ತಿಕ್ಕಾಟಗಳನ್ನು ತಂದು ಅಧಿಕಾರಕ್ಕಾಗಿ ಅವಣಿಸುತ್ತಿವೆ. ರಾಜಕೀಯವಾಗಿ ದಲಿತನಿಗೆ ಸ್ಥಾನ ಕೊಟ್ಟು ಅಧಿಕಾರ ಮಾತ್ರ ಮೇಲ್ವರ್ಗದವರಲ್ಲಿ ಕೇಂದ್ರೀಕೃತವಾಗುತ್ತಿವೆ. ದಲಿತ ಸಮುದಾಯಗಳಿಗೆ ಸ್ಥಾನಮಾನಗಳು ಸಿಗದಂತೆಯು ಅವಕಾಶಗಳನ್ನು ತಪ್ಪಿಸುತ್ತಿವೆ. ಸ್ಥಾನ ಮಾತ್ರ ದಲಿತನದು, ಅಧಿಕಾರ ಮಾತ್ರ ಶ್ರೀಮಂತರದ್ದು/ಮೇಲ್ವರ್ಗದವರದ್ದು ಎನ್ನುವ ಪರಿಸ್ಥಿತಿ ಇಂದಿನ ಹಲವು ವಲಯದಲ್ಲಿದೆ. ಪ್ರಜಾಪ್ರಭುತ್ವದಲ್ಲಿ ಸಾಂವಿಧಾನಿಕ ಸ್ಥಾನಮಾನ ಗಳಿದ್ದಾಗ್ಯೂ ದಲಿತನ ಶೋಚನೀಯ ಸ್ಥಿತಿ ಬದಲಾಗಲಿಲ್ಲ. ಇಂದಿಗೂ ಶೋಷಣೆ, ಅಭದ್ರತೆ, ಆಸಮಾನತೆ ಕೊನೆಗಾಣಲಿಲ್ಲ. ಅದಕ್ಕೆ ಉತ್ತರ ಹುಡುಕುತ್ತಲೇ ಅನೇಕ ತಳಸಮುದಾಯಗಳು ಹೋರಾಟದ ಕ್ರಾಂತಿಯನ್ನೇ ನಂಬಿಕೊಂಡು ಜೈ ಘೋಷ ಹಾಕುತ್ತಲೇ ಇವೆ. ಜಯ ಸಿಗುವುದೆಂತು. ನೊಂದವರ ನೋವನು ನೋಯದವರು ಎತ್ತ ಬಲ್ಲರು.

ಪರಾಮರ್ಶನ ಗ್ರಂಥಗಳು


1. ಅನ್‌ಟಚೆಬಲ್ ಗಾಡ್, ಕಾಂಚ ಐಲಯ್ಯ, ಸಾಮ್ಯಾ ಪ್ರಕಾಶನ ಕೊಲಕತ್ತಾ 2018.
2. ಎದೆಗೆ ಬಿದ್ದ ಅಕ್ಷರ, ದೇವನೂರ ಮಹಾದೇವ, ಅಭಿನವ ಪ್ರಕಾಶನ ಬೆಂಗಳೂರು 2013.
3. ವೈ ಐಯಾಮ್ ನಾಟ್ ಎ ಹಿಂದು, ಕಾಂಚ ಐಲಯ್ಯ,
4. ದಲಿತ ಚಳುವಳಿ ಚರಿತೆ, ಡಾ.ವಿ.ಮುನಿವೆಂಕಟಪ್ಪ, ತನುಮನು ಪ್ರಕಾಶನ ಮೈಸೂರು 2009.
5. ಡಾ.ಅಂಭೇಡ್ಕರ್‌ರ ಸಮಗ್ರ ಬರಹಗಳು ಸಂಪುಟ 20, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು 2013.